ಪೂರ್ಣ ಪ್ರಮಾಣದ ತನಿಖೆಯಾದರೆ ಮಾತ್ರ ಅದೆಲ್ಲಾ ಗೊತ್ತಾಗುತ್ತದೆ. ಅನೇಕ ಗುರುತರವಾದ ಆಪಾದನೆಗಳನ್ನು ನಾವು ಮಾಡಿದ್ದೇವೆ. ಕೋರ್ಟಿನಲ್ಲಿರುವಂಥ ವ್ಯಾಪ್ತಿಗೆ ಎಲ್ಲ ವಿಷಯಗಳೂ ಬಂದಿದ್ದರೆ ಅದನ್ನು ಹೇಳಬಹುದಾಗಿತ್ತು. ಆದರೆ ಎಲ್ಲಾ ವಿಚಾರಗಳೂ ಕೋರ್ಟಿನಲ್ಲಿಲ್ಲ. ಸಿ.ಬಿ.ಐ. ತನಿಖೆ ಮಾಡದೇ ಇದ್ದರೆ ವಾಸ್ತವಾಂಶ ಹೊರಗಡೆ ಬರುವುದಿಲ್ಲ. ಆ ದೃಷ್ಟಿಯಿಂದ ಸಿ.ಬಿ.ಐ. ವಿಚಾರಣೆಗೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೆ, ಕಾನೂನು ಪ್ರಕಾರ ಸಿ.ಬಿ.ಐ. ತನಿಖೆ ಮಾಡುವುದಕ್ಕೆ ಸಾಧ್ಯವೇ ಇಲ್ಲ ಎಂಬ ಅಭಿಪ್ರಾಯವನ್ನು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಎಂ. ಖರ್ಗೆ.—ತಮ್ಮ ಕೈಯಿಂದ ತಪ್ಪು ಮಾಡಿಸಿದ್ದಾರೆ ಎಂದು ಹೇಳಿದರೆ, ಯಾವ ತಪ್ಪೂ ಮಾಡಿಲ್ಲ ಎಂಬ ಅಭಿಪ್ರಾಯವನ್ನು ಮಂತ್ರಿಗಳು ಹೇಳಿದ್ದಾರೆ. ತಪ್ಪು ಮಾಡಿಲ್ಲ ಎನ್ನುವುದಾದರೆ ಕಾನೂನು ರೀತಿಯಿಂದ ಮಾಡಿಲ್ಲ ಎಂದು ಈಗ ಆಪಾದನೆ ಮಾಡುತ್ತಿದ್ದೇವೆ. ಆದ್ದರಿಂದ ಸಿ.ಬಿ.ಐ. ತನಿಖೆಗೆ ಕೇಳುತ್ತಿದ್ದೇವೆ. ಇದಕ್ಕೆ ಏತಕ್ಕೆ ಒಪ್ಪಿಕೊಳ್ಳಬಾರದು ? ತಪ್ಪೇ ಮಾಡಿಲ್ಲ ಎನ್ನುವುದಾದರೆ, ನಿಷ್ಪಕ್ಷಪಾತವಾಗಿ, ನ್ಯಾಯವಾಗಿ ಮಾಡಿದ್ದರೆ ವಿಚಾರಣೆಗೆ ಒಪ್ಪಿ.

ಶ್ರೀ ರಮೇಶ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ನಾವು ಯಾವ ತಪ್ಪೂ ಮಾಡಿಲ್ಲ. ಎಂಥ ಎನ್‌ಕ್ವೈರಿ ಮಾಡಿದರೂ ನಾವೂ ಎದುರಿಸುವುದಕ್ಕೆ ಸಿದ್ಧರಿದ್ದೇವೆ. ಆದರೆ ಈಗ ಕಾನೂನು ಪ್ರಕಾರ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದ್ದಾರೆ. ಮುಂದೆ ಸ್ವಲ್ಪ ದಿನಗಳಲ್ಲಿ ಲೋಕಾಯುಕ್ತ ಜಾರಿಗೆ ಬರುತ್ತಿದೆ, ಆಗ ಅದರ ಮುಂದೆ ಈ ವಿಚಾರ ಹೋದಾಗ ಏನಾಗುತ್ತದೋ ಆಗಲಿ ಎಂದು ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಬಹಳ ಗುರುತರವಾದ ಆರೋಪಗಳು ಸದನದಲ್ಲಿ ಬಂದಿವೆ. ಸರ್ಕಾರ ಅಧಿಕಾರ ದುರುಪಯೋಗ ಮಾಡಿಕೊಂಡಿದೆ ಎಂಬುದು, ಮಂತ್ರಿಮಂಡಲದ ಸದಸ್ಯರ ಸಂಬಂಧಿಕರು ಪಾಲುದಾರರು ಎಂಬುದು, ಮತ್ತು ಸೆಕ್ಯೂರಿಟಿ ಡಿಪಾಸಿಟ್ ಕೇವಲ ೫೦ ಸಾವಿರ ರೂಪಾಯಿ ತೆಗೆದುಕೊಂಡು ೨ ಕೋಟಿ ರೂಪಾಯಿ ಮೌಲ್ಯ ಕೊಟ್ಟಿರತಕ್ಕದ್ದು, ಬೇನಾಮಿ ವ್ಯವಹಾರ ಮಾಡಿರುವುದು, ಇಂಥ ಆರೋಪಗಳಿದ್ದರೂ ಮತ್ತು ಇದರಲ್ಲಿ ಸರ್ಕಾರ ನಷ್ಟ ಅನುಭವಿಸತಕ್ಕ ವಿಚಾರಗಳಿದ್ದರೂ ಕೂಡ ಇದನ್ನು ಸಣ್ಣ ವಿಚಾರ ಎಂದು ಹೇಳುವುದು ಸರಿಯಲ್ಲ. ಇದರಿಂದ ಸರ್ಕಾರದ ಖಜಾನೆಗೆ ಕೋಟಗಟ್ಟಲೆ ಹಣ ನಷ್ಟವಾಗುವುದಲ್ಲದೆ ಸ್ವಲಾಭದ ಪ್ರಶ್ನೆ ಇರುವುದರಿಂದ ಇದನ್ನು ತನಿಖೆಗೆ ಒಳಪಡಿಸಬೇಕು. ವಾಸ್ತವಾಂಶಗಳನ್ನು ಕರ್ನಾಟಕ ರಾಜ್ಯದ ಜನತೆಗೆ ಬೆಳಕಿಗೆ ತರುವ ದೃಷ್ಟಿಯಿಂದ ಇದನ್ನು ಮಾಡಬೇಕು. ಆದರೆ ಇದನ್ನು ಸರ್ಕಾರ ಒಪ್ಪುತ್ತಾ ಇಲ್ಲ, ಈ ಸರ್ಕಾರದ ನೀತಿಯನ್ನು ನಾವು ಪ್ರತಿಭಟಿಸಬೇಕಾಗುತ್ತದೆ ಹಾಗೂ ಇದನ್ನು ವಿರೋಧ ಮಾಡಬೇಕಾಗುತ್ತದೆ. ವಾಸ್ತವಾಂಶವನ್ನು ಮುಚ್ಚಿಟ್ಟು ರಾಜ್ಯದ ಹಿತವನ್ನು ಸಂಪೂರ್ಣವಾಗಿ ಕಡೆಗಣಿಸಿದ್ದರಿಂದ ಈ ಬಗ್ಗೆ ನಮ್ಮ ಪ್ರತಿಭಟನೆಯನ್ನು ತೋರಿ ಈ ಸಂದರ್ಭದಲ್ಲಿ ಸಭಾತ್ಯಾಗ ಮಾಡುತ್ತೇವೆ.

(ಈ ಸಮಯದಲ್ಲಿ ಕಾಂಗ್ರೆಸ್ ಐ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ನಿನ್ನೆಯ ದಿವಸ ಪರಿಶಿಷ್ಟ ಜಾತಿ ಪಗೈರೆಯವರ ಬಗ್ಗೆ ವಿಚಾರಣೆ ಮಾಡುವುದಕ್ಕೆ ವಿಶೇಷ ನ್ಯಾಯಾಲಯಗಳನ್ನು ಬೆಂಗಳೂರು ಮತ್ತು ಬೆಳಗಾಂನಲ್ಲಿ ತೆರೆಯಬೇಕೆಂದು ತೀರ್ಮಾನ ಮಾಡಿದ್ದಾರೆಂದು ಹೇಳಿದೆ. ಆದರೆ ಬೆಂಗಳೂರು ಎನ್ನುವುದನ್ನು ''ಮೈಸೂರು'' ಎಂದು ಸರಿಪಡಿಸಿಕೊಳ್ಳಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ಬೆಂಗಳೂರಿನಲ್ಲಿನ ಚೈನ್ ಸ್ನ್ಯಾಚಿಂಗ್ ಬಗ್ಗೆ ಪ್ರಶ್ನೆಯನ್ನು ಕೇಳಿದ್ದರು, ೧೯೮೩ರಲ್ಲಿ ಈ ಬಗ್ಗೆ ೧೫೦ ಕೇಸ್‌ಗಳು ರಿಪೋರ್ಟ್ ಆಗಿದ್ದು ಅವಲ್ಲಿ ೮೨ ಕೇಸ್‌ಗಳು ಡಿಟೆಕ್ಟ್ ಆಗಿವೆ. ಹಾಗೂ ೧೯೮೪ರಲ್ಲಿ ೧೦೮ ರಿಪೋರ್ಟ್ ಆಗಿದ್ದು ಇದರಲ್ಲಿ ೭೫ ಕೇಸ್‌ಗಳು ಡಿಟೆಕ್ಟ್ ಆಗಿದೆ ಹಾಗೂ ೧೯೮೫ರಲ್ಲಿ ೨೬ ಕೇಸ್‌ಗಳು ರಿಪೋರ್ಟ್ ಆಗಿದ್ದು ಅದರಲ್ಲಿ ೧೬ ಕೇಸ್‌ಗಳು ಡಿಟೆಕ್ಟ್ ಆಗಿವೆ.

ಅಧ್ಯಕ್ಷರು.—ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಹೀಗಿದೆ.—

''೩೧-೩-೧೯೮೬ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೨೫, ೨೩, ೨೬ ಹಾಗೂ ೧೯ ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ಮೊತ್ತವನ್ನು ಪಡೆಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮುಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮುಂಜೂರು ಮಾಡಬೇಕು''.